
# ಉಪಯುಕ್ತ ಗ್ರಂಥ: ಶಾಂಕರ ಭಾಷ್ಯಗಳ ಉದ್ಧರಣೆಗಳ ಕೋಶ

**ಲೋ**ಕದಲ್ಲಿ ಅನುಭವದಲ್ಲಿರುವ ದುಃಖಬಾಧೆಗಳಿಗೆ ವೈದ್ಯ ಆರ್ಥಿಕ ಸಂಘ ಸಂಸ್ಥೆ – ಹೀಗೆ ಲೌಕಿಕ ಪರಿಹಾರಗಳಿವೆ, ಆದರೆ ಅವು ತಾತ್ಕಾಲಿಕ, ಆತ್ಯಂತಿಕ ಪರಿಹಾರಗಳಲ್ಲ. ಇವುಗಳಿಗೆ ಕಾರಣವೇನು? ಇವಕ್ಕೆ ಆತ್ಯಂತಿಕ ಪರಿಹಾರ ಇದೆಯೆ? ಅದು ಹೇಗೆ ಸಾಧ್ಯವಾಗುತ್ತದೆ, ಈ ಎಲ್ಲ ವಿಚಾರಗಳ ಚಿಂತನ ಮಂಥನ ಪ್ರಯೋಗಗಳ ಫಲವಾಗಿ ಹುಟ್ಟಿಕೊಂಡ ಶಾಸ್ತ್ರಗಳೇ ದರ್ಶನಗಳು. ಅವೆಲ್ಲವೂ ಲೋಕದ ವಿವಿಧ ಬಗೆ ದುಃಖಗಳ ಆತ್ಯಂತಿಕ ನಿವಾರಣೆಯೇ ಶಾಸ್ತ್ರಗಳ ಮೂಲ ಉದ್ದೇಶ ಎಂದು ಘೋಷಿಸುತ್ತವೆ. ಇವುಗಳಲ್ಲಿ ವೇದಾಂತ ದರ್ಶನಗಳು ಸೇರ್ಪಡೆಯಾಗುತ್ತವೆ. ಇವು ತಮ್ಮ ಸಿದ್ಧಾಂತಗಳನ್ನು ಶ್ರೌತ ಸ್ಮಾರ್ತ ನ್ಯಾಯ ಮೂಲ ಆಧಾರಗಳನ್ನವಲಂಬಿಸಿ ಸ್ಥಾಪಿಸಿವೆ. ಈ ಮೂಲ ಆಧಾರಗಳನ್ನು ಪ್ರಸ್ಥಾನ ತ್ರಯ ಎನ್ನುವರು. ಜೀವಿ ತನ್ನ ದುಃಖದಿಂದ ಬಿಡುಗಡೆ ಹೊಂದಲು ಮುಟ್ಟಬೇಕಾದ ಆತ್ಯಂತಿಕ ಗುರಿಯೆಡೆಗೆ ಸಾಗಬೇಕಾದ ಮಾರ್ಗ(ಪ್ರಸ್ಥಾನ)ಗಳನ್ನು ಇವು ತಿಳಿಸುತ್ತವೆ. ಶ್ರೌತ ಮೂಲ–ಉಪನಿಷತ್ತುಗಳು, ಸ್ಮಾರ್ತಮೂಲ– ಭಗವದ್ಗೀತೆ, ನ್ಯಾಯ ಮೂಲ–ಬ್ರಹ್ಮಸೂತ್ರ, ಇವು ಪ್ರಸ್ಥಾನತ್ರಯ. ಅದ್ವೈತ ದರ್ಶನ ಪ್ರವರ್ತಕರಾದ ಶ್ರೀಶಂಕರಾಚಾರ್ಯರು ಇವುಗಳಿಗೆ ಭಾಷ್ಯವನ್ನು ಬರೆಯುವುದರ ಮೂಲಕ ತಮ್ಮ ಸಿದ್ಧಾಂತ ತತ್ತ್ವಗಳನ್ನು ಪ್ರತಿಪಾದಿಸಿದ್ದಾರೆ. ಊಹಿಸಲೂ ಕಷ್ಟವಾಗುವಂತಹ ಅಧ್ಯಾತ್ಮ ತತ್ತ್ವಗಳನ್ನು ತಮ್ಮ ಭಾಷ್ಯದಲ್ಲಿ ಬಹಳ ಸರಳವಾಗಿ ಸುಗಮವಾಗಿ ತಿಳಿಸಿದ್ದಾರೆ. ವಿಚಾರ ವಿವರಣೆಯ ಅಗತ್ಯವನ್ನನುಸರಿಸಿ ಸಣ್ಣ ದೊಡ್ಡ ವಾಕ್ಯಗಳನ್ನು ರಚಿಸಿದ್ದಾರೆ. ಪ್ರಸ್ಥಾನತ್ರಯಗಳು ಭಾಷ್ಯ ಸಹಾಯವಿಲ್ಲದೆ ಅರ್ಥವಾಗುವಂತಹುದಲ್ಲ.




*Title* : A Collection from Sankara's Commentaries on the Prasthana-Traya

*Author* : Swami Kritarthananda

*Publisher* : Ramakrishna Mission Institute of Culture, Golpark, Kolkata - 700 029

*Pages* : 928 *Price* : 600 / -

ಈ ಪ್ರಸ್ಥಾನತ್ರಯಗಳೇ ಅಗಾಧ ಸಾಗರ, ಇನ್ನು ಇವುಗಳ ಅರ್ಥವನ್ನು ಸ್ಪಷ್ಟಪಡಿಸುವ ವಿವರಣಾತ್ಮಕ ಭಾಷ್ಯಗಳ ವ್ಯಾಪ್ತಿ ಇನ್ನಷ್ಟು ವ್ಯಾಪಕವಿರಬಹುದು! ಕಲ್ಪಿಸಲೂ ಸಾಧ್ಯವಿಲ್ಲ. ಅಂತಹ ಭಾಷ್ಯಗಳ ಅಧ್ಯಯನಕ್ಕೆ ವ್ಯಕ್ತಿ ತನ್ನ ಸಂಪೂರ್ಣ ಜೀವಿತವನ್ನೇ ಮುಡಿಪಾಗಿಟ್ಟರೂ ಅವುಗಳ ಆಮೂಲಾಗ್ರ ಅಧ್ಯಯನ ಅಸಂಭವವೇನೋ! ಆ ಎಲ್ಲವನ್ನು ಓದಿ ಅರ್ಥೈಸಿಕೊಂಡು ಮನನ ಮಾಡಿ ನೆನಪಿನಲ್ಲಿಟ್ಟುಕೊಳ್ಳುವುದು ಭಗೀರಥ ಸಾಹಸವೇ ಸರಿ. ಹಾಗಾಗಿ ಪೂಜ್ಯ ಸ್ವಾಮಿ ಕೃತಾರ್ಥಾನಂದರು ಅವುಗಳ ಹೃದಯಭೂತವಾದ, ಅತ್ಯಗತ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶಗಳನ್ನು ಕ್ರೋಡೀಕರಿಸಿ ಒಂದೆಡೆ ಸಂಗ್ರಹಿಸುವ ಅಗತ್ಯತೆಯನ್ನು ಮನಗಂಡರು. ಅದರ ಫಲರೂಪವೇ ಈ ಕೃತಿ, 'A Collection from Sankara's Commentaries on the Prasthana-Traya'


ಅದ್ವೈತವೇದಾಂತವನ್ನು ಅಧ್ಯಯನ ಮಾಡುವ ಕುತೂಹಲಿಗಳಿಗೆ, ಸಂಶೋಧಕರಿಗೆ ಸುಲಭಲಭ್ಯವಾದ ಅತಿಪ್ರಮುಖ ಪರಾಮರ್ಶನ ಗ್ರಂಥ ಇದಾಗಿದೆ. ಇದು ಅದ್ವೈತ ವೇದಾಂತ ತತ್ತ್ವಗಳ ಕುರಿತಾದ ವಿಶಿಷ್ಟ ಸಂಶೋಧನೆಗಳಿಗೆ ಪ್ರೇರಕವೂ ಸಹಾಯಕವೂ ಆಗಲಿ ಎಂಬುದು ಲೇಖಕರ ಹೃತ್ಪೂರ್ವಕ ಸವಿನಯ ಭಾವನೆ. ಕೃತಿಕಾರರೇ ಹೇಳುವಂತೆ ೯೦೦ ಪುಟಗಳಿಗೂ ಮೀರಿದ ಈ ಬೃಹದ್ಗ್ರಂಥ ಸುಮಾರು ೨೫೦೦ ವಾಕ್ಯ, ವಾಕ್ಯಸಮೂಹಗಳನ್ನು ಒಳಗೊಂಡಿದೆ. ಇಲ್ಲಿ ಆಯ್ಕೆ ಗೊಂಡಿರುವ ಸಿದ್ಧಾಂತಪ್ರತಿಪಾದಕಗಳಾದ ಲಕ್ಷಣಾತ್ಮಕ ವಾಕ್ಯಗಳು, ಪ್ರಮಾಣ ವಾಕ್ಯಗಳು, ವಿವರಣಾತ್ಮಕ ವಾಕ್ಯಗಳ ಸ್ವರೂಪದದ್ದಾಗಿವೆ. ಇವು ಸಿದ್ಧಾಂತದ ಸ್ವರೂಪವನ್ನರಿಯಲು ಸಹಾಯಕಗಳಾಗುವುವು. ಇವುಗಳ ಆಧಾರದ ಮೇಲೆ ಅದ್ವೈತ ಸಿದ್ಧಾಂತದ ವಿಭಿನ್ನ ಆಯಾಮಗಳು, ಅವುಗಳನ್ನು ಗಮನಿಸಬಹುದಾದ ವಿಶಿಷ್ಟ ದೃಷ್ಟಿಕೋನಗಳು, ಸಂಶೋಧಕನಿಗೆ ದೊರಕುತ್ತವೆ. ಈ ವಾಕ್ಯಗಳ ಸಹಾಯದಿಂದ ತತ್ತ್ವಜಿಜ್ಞಾಸು, ವಿಭಿನ್ನ ದೃಷ್ಟಿಕೋನಗಳಿಂದ ಅದ್ವೈತ ತತ್ತ್ವವನ್ನು ಕುರಿತು ಚಿಂತಿಸಲು ಚರ್ಚಿಸಲು ಅದರ ವ್ಯಾಪಕತೆ ವಿಸ್ತಾರ ಹರಹನ್ನು ಮನಗಾಣಲು ಸಾಧ್ಯವಾಗುತ್ತದೆ. ಈ ಕಾರಣದಿಂದ ಲೇಖಕರು ಈ ಬೃಹದ್ಗ್ರಂಥದಲ್ಲಿ ಇಂತಹ ವಾಕ್ಯಗಳನ್ನೇ ಸಂಗ್ರಹಿಸಲು ಪ್ರಯತ್ನಿಸಿರುವರು.

ಇದರಲ್ಲಿ ಒಟ್ಟು ೧೪ ಅಧ್ಯಾಯಗಳಿವೆ. ಸ್ಮೃತಿಪ್ರಸ್ಥಾನಕ್ಕೆ ಸೇರಿದ ಭಗವದ್ಗೀತಾಭಾಷ್ಯದ ೩೪೮ ವಾಕ್ಯಗಳಿವೆ, ಶ್ರುತಿಪ್ರಸ್ಥಾನಕ್ಕೆ ಸೇರಿದ ಪ್ರಧಾನವಾದ ಹನ್ನೆರಡು ಉಪನಿಷತ್ತುಗಳ ಭಾಷ್ಯದ ಸುಮಾರು ೧೫೦೦ ವಾಕ್ಯಗಳಿವೆ. ನ್ಯಾಯಪ್ರಸ್ಥಾನ ವಿಭಾಗಕ್ಕೆ ಸೇರಿದ ಬ್ರಹ್ಮಸೂತ್ರಭಾಷ್ಯಕ್ಕೆ ಸಂಬಂಧಿಸಿ ೫೪೪ ವಾಕ್ಯಗಳಿವೆ. ಮೊದಲು ಆಯ್ಕೆ ಮಾಡಿರುವ ವಾಕ್ಯಗಳ ಸಂಸ್ಕೃತ ಭಾಷೆಯ ಅವತರಣಿಕೆಯನ್ನು ದೇವನಾಗರೀ ಲಿಪಿಯಲ್ಲಿ ಕೊಡಲಾಗಿದೆ, ಅವುಗಳ ಮೂಲ ಆಕರವನ್ನು ಸೂಚಿಸಲಾಗಿದೆ. ಆ ನಂತರ ಆ ವಾಕ್ಯಗಳ ಇಂಗ್ಲಿಷ್ ರೂಪಾಂತರ ಕೊಟ್ಟು ಅವುಗಳ ಇಂಗ್ಲಿಷ್ ಭಾಷಾಂತರವನ್ನೂ ನೀಡಲಾಗಿದೆ. ಜಿಜ್ಞಾಸು ಹಾಗೂ ಸಂಶೋಧಕರಿಗೆ ತಾವು ಪರಾಮರ್ಶಿಸಬೇಕೆಂದೆನಿಸುವ ಪದ, ಪದಜಾಲ, ವಾಕ್ಯಜಾಲಗಳು ಸುಲಭವಾಗಿ ದೊರಕಲೆಂಬ ಉದ್ದೇಶದಿಂದ ಅಕಾರಾದಿ ಪಟ್ಟಿಯನ್ನು ಎರಡು ವಿಸ್ತಾರವಾದ ಪರಿವಿಡಿಗಳಲ್ಲಿ ವಿಭಜಿಸಿ ಕೊಡಲಾಗಿದೆ. ಮೊದಲ ಪರಿವಿಡಿ ಸಂಸ್ಕೃತ (ಭಾಷ್ಯದ ಮೂಲ) ವಾಕ್ಯಗಳ ಪಟ್ಟಿಗೆ ಸೀಮಿತವಾಗಿದ್ದರೆ ಎರಡನೆಯ ಪರಿವಿಡಿ ಭಾಷ್ಯವಾಕ್ಯಗಳ ಅರ್ಥಜ್ಞಾನಕ್ಕೆ ಸಹಾಯಕವಾಗುವ ಇಂಗ್ಲಿಷ್ ಪದಗಳ (catch word) ಪಟ್ಟಿಯನ್ನು ಒಳಗೊಂಡಿದೆ.

ಅತ್ಯಂತ ವ್ಯಾಪಕವಾದ ಭಾಷ್ಯಸಾಹಿತ್ಯವನ್ನು ಪೂಜ್ಯ ಸ್ವಾಮಿ ಕೃತಾರ್ಥಾನಂದರು ಅಪಾರ ಶ್ರಮವಹಿಸಿ, ಅತ್ಯಮೂಲ್ಯವಾದ ಪವಿತ್ರ ಸಮಯವನ್ನು ವಿನಿಯೋಗಿಸಿ ವಿಶೇಷವಾದ ಮುತುವರ್ಜಿಯಿಂದ ಅರ್ಥಪೂರ್ಣವಾಗಿ ಸಂಗ್ರಹಿಸಿದ್ದಾರೆ. ಅವರ ಈ ಪ್ರಯತ್ನ ಅತ್ಯಂತ ಅಭಿನಂದನೀಯ. ಇದಕ್ಕೆ ಆಧ್ಯಾತ್ಮಿಕ ಜ್ಞಾನ-ಪಿಪಾಸು, ಜನತೆ ಸ್ವಾಮೀಜಿಯವರಿಗೆ ಎಷ್ಟು ಋಣಿಯಾಗಿದ್ದರೂ ಸಾಲದು. ಅನೇಕ ಮಂದಿ ಸಾಧಕರ ಕೈಸೇರಿ ಇದರ ಉಪಯೋಗವನ್ನು ಅಧಿಕ ಸಂಖ್ಯೆಯ ಜನರು ಪಡೆದುಕೊಳ್ಳುವಂತಾಗಬೇಕು, ಆಗ ಸ್ವಾಮೀಜಿಯವರ ಪರಿಶ್ರಮ ಸಾರ್ಥಕವಾಗುತ್ತದೆ.

*– ಡಾ. ಕೆ.ಎಲ್.ಪ್ರಸನ್ನಾಕ್ಷೀ*

# 'ವಿಶ್ವಧರ್ಮ' – ಸ್ವಾಮಿ ವಿವೇಕಾನಂದರ ಸಾಕ್ಷ್ಯಚಿತ್ರ




*ಚಿತ್ರಕಥೆ ಹಾಗೂ ನಿರೂಪಣಾ ಸಾಹಿತ್ಯ:* **ಸಂಪಿಗೆ ತೋಂಟದಾರ್ಯ, ಎಚ್.ಟಿ. ನಾಗೇಂದ್ರ**

*ಸಂಗೀತ:* **ಮನೋರಂಜನ್ ಪ್ರಭಾಕರ್**

*ನಿರ್ದೇಶನ:* **ಎಚ್.ಟಿ. ನಾಗೇಂದ್ರ**

*ಪ್ರಕಾಶಕರು:* **SSEF, ಬೆಂಗಳೂರು**

*ಬೆಲೆ :* **ಉಚಿತ ವಿತರಣೆ**

**ಬೆಂ**ಗಳೂರಿನ ಸಾಮಾಜಿಕ-ಆಧ್ಯಾತ್ಮಿಕ ಶೈಕ್ಷಣಿಕ ಚಲನಚಿತ್ರ (SSEF) ಸಂಸ್ಥೆಯು ಸ್ವಾಮಿ ವಿವೇಕಾನಂದರ ವಿಚಾರಧಾರೆಗಳನ್ನು ಆಧರಿಸಿದ 'ವಿಶ್ವಧರ್ಮ' ಎಂಬ ಸಾಕ್ಷ್ಯಚಿತ್ರವನ್ನು ಹೊರತಂದಿದೆ. ಎರಡು ಡಿವಿಡಿ.ಗಳಲ್ಲಿ 'ಸಾಕ್ಷಾತ್ಕಾರ' ಹಾಗೂ 'ಸಂಪ್ರದಾಯ' ಎಂಬ ಎರಡು ಭಾಗಗಳಲ್ಲಿ ನಿರ್ಮಿಸಲಾದ ಈ ಸಾಕ್ಷ್ಯಚಿತ್ರದಲ್ಲಿ ಹಲವು ಮಾಧ್ಯಮಗಳನ್ನು ಅಳವಡಿಸಿಕೊಂಡು ಸ್ವಾಮೀಜಿ ಸಂದೇಶಗಳನ್ನು ಸಮರ್ಪಕವಾಗಿ ಜನರಿಗೆ ತಲುಪಿಸುವ ಕಾರ್ಯವನ್ನು ಸಮರ್ಥವಾಗಿ ಮಾಡಲಾಗಿದೆ. ವಿವಿಧ ಬಗೆಯ ಸನ್ನಿವೇಶಗಳನ್ನು ನೈಜ ಚಿತ್ರೀಕರಣಗಳೊಂದಿಗೆ ಪ್ರಸ್ತುತಪಡಿಸಲಾಗಿದ್ದು, ನಡುನಡುವೆ ಅನಿಮೇಷನ್, ರೇಖಾಚಿತ್ರ, ಸ್ಥಿರಚಿತ್ರಗಳು, ಗ್ರಾಫಿಕ್ಸ್‌ಗಳನ್ನೂ ಅಗತ್ಯವಿದ್ದಂತೆ ಅಳವಡಿಸಲಾಗಿದೆ. ಹಿನ್ನೆಲೆ ಸಂಗೀತ, ಸೂಕ್ತ ಹಾಡುಗಳು ಪರಿಣಾಮಕಾರಿಯಾದ ಭಾವವನ್ನು ಹೊರಹೊಮ್ಮಿಸುತ್ತವೆ. ಒಟ್ಟಿನಲ್ಲಿ ಇದೊಂದು ವಿನೂತನ ಶೈಲಿಯ, ಗುಣಮಟ್ಟದ ಸಾಕ್ಷ್ಯಚಿತ್ರವಾಗಿದೆ.

ಮೊದಲ ಭಾಗವಾದ 'ಸಾಕ್ಷಾತ್ಕಾರ' ಡಿವಿಡಿ.ಯಲ್ಲಿ ಸ್ವಾಮಿ ವಿವೇಕಾನಂದರ ಜೀವನ-ಉಪದೇಶಗಳ ಹಿನ್ನೆಲೆ, ಅವರ ಪರಿವ್ರಾಜಕ ಜೀವನ, ಅವರ ಆಧ್ಯಾತ್ಮಿಕ ಅನುಭೂತಿಗಳಿಗೆ ಹಿನ್ನೆಲೆಯಾಗಿದ್ದ ಭಾರತೀಯ ಸನಾತನ ಸಂಸ್ಕೃತಿ ಹಾಗೂ ಆಧ್ಯಾತ್ಮಿಕತೆ, ವೇದ-ಉಪನಿಷತ್ತುಗಳಲ್ಲಿ ಮೂಡಿಬಂದ ಸತ್ಯದ ಸಾಕ್ಷಾತ್ಕಾರ ಇವುಗಳ ವಿವರಣೆಯಿದೆ. ಮುಂದೆ, ಇತಿಹಾಸದುದ್ದಕ್ಕೂ ಮುಂದುವರಿದ ಧಾರ್ಮಿಕ ವಾಹಿನಿ ಹೇಗೆ ಸ್ವಾಮಿ ವಿವೇಕಾನಂದರ ಪರಿವ್ರಾಜಕ ಜೀವನದುದ್ದಕ್ಕೂ ಮಾರ್ದನಿಸಿತ್ತು ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ.

ಎರಡನೇ ಭಾಗವಾದ 'ಸಂಪ್ರದಾಯ' ಡಿವಿಡಿ.ಯಲ್ಲಿ ಹಿಂದಿನ ಭಾಗದಲ್ಲಿ ಚಿತ್ರಿಸಲಾದ ವಿಷಯಗಳ ಮುಂದುವರಿಕೆಯಿದೆ. ಗಹನವಾದ ದರ್ಶನ, ತತ್ತ್ವ ಹಾಗೂ ಆಧ್ಯಾತ್ಮಿಕ ವಿಚಾರಗಳು ಸ್ಮೃತಿ, ಪುರಾಣ, ವಿವಿಧ ಆಚರಣೆ-ಸಂಪ್ರದಾಯಗಳ ಮೂಲಕ ಹೇಗೆ ಜನಸಾಮಾನ್ಯರ ಜೀವನದಲ್ಲಿ ಹಾಸುಹೊಕ್ಕಾಗಿ ಬಂದಿದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಡಿವಿಡಿ.ಯ ಕೊನೆಯಲ್ಲಿ ಸ್ವಾಮಿ ವಿವೇಕಾನಂದರ ಪ್ರವಚನ, ಉಪದೇಶಗಳ ಮೂಲಕ ಈ ಸಾರ್ವತ್ರಿಕ ಧರ್ಮವು ಹೇಗೆ ಆಧುನಿಕ ಜಗತ್ತಿಗೆ ಅನ್ವಯವಾಗುವಂತೆ ಶಕ್ತಿಶಾಲಿಯಾಗಿ ಪ್ರಕಟಗೊಂಡಿದೆ ಎಂಬುದನ್ನು ವಿವಿಧ ಉದ್ಧರಣೆ, ಚಿತ್ರಣಗಳೊಂದಿಗೆ ನೀಡಲಾಗಿದೆ.

ಹೀಗೆ ಈ ಎರಡು ಡಿವಿಡಿ.ಗಳ ಮೂಲಕ ಸ್ವಾಮಿ ವಿವೇಕಾನಂದರ ಜೀವನ, ಸಂದೇಶ; ಯೋಗ, ಸಾಧನೆ, ಧರ್ಮ, ಶಾಸ್ತ್ರ, ಸಂಸ್ಕೃತಿಯೇ ಮೊದಲಾದ ನಮ್ಮ ಆಧ್ಯಾತ್ಮಿಕ ಪರಂಪರೆಯ ಪ್ರಧಾನ ಅಂಶಗಳನ್ನು ಪರಿಚಯಿಸಲಾಗಿದೆ. ಚಲನಚಿತ್ರ, ರೇಖಾಚಿತ್ರ, ಸಂಗೀತವೇ ಮೊದಲಾದ ಹಲವು ಮಾಧ್ಯಮಗಳನ್ನು ಇಲ್ಲಿ ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ. ಸುಮಾರು ೨ ಗಂಟೆ ಅವಧಿಯ ಈ ಡಿವಿಡಿ.ಗಳಲ್ಲಿ ಸಮಗ್ರ ಭಾರತದ ಪರಂಪರೆ ಹಾಗೂ ಸ್ವಾಮೀಜಿ ಜೀವನ, ಧ್ಯೇಯ, ಆದರ್ಶಗಳನ್ನು ಒಳಗೊಳ್ಳಲು ಇದರ ನಿರ್ಮಾಪಕರು ವಿಶೇಷ ಶ್ರಮವಹಿಸಿ ದುಡಿದಿದ್ದಾರೆ. ಈ ಸಾಕ್ಷ್ಯಚಿತ್ರದ ನಿರ್ಮಾಣದ ಹಿಂದೆ ವಾಣಿಜ್ಯ ಉದ್ದೇಶಗಳಿಲ್ಲದೆ, ಕೇವಲ ಸ್ವಾಮಿ ವಿವೇಕಾನಂದರ ಧ್ಯೇಯಾದರ್ಶಗಳ ಪ್ರಚಾರವಷ್ಟೇ ಇರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ. ಅದಕ್ಕನುಗುಣವಾಗಿ, ಈ ಸಾಕ್ಷ್ಯಚಿತ್ರಕ್ಕೆ ಯಾವುದೇ ಬೆಲೆ ನಿಗದಿ ಮಾಡದೆ, 'ಉಚಿತ ವಿತರಣೆ'ಯಾಗಿ ನೀಡಲಾಗುವುದು. **ಆಸಕ್ತರು ಸಂಪರ್ಕಿಸಬೇಕಾದ ವಿಳಾಸ :** ಶ್ರೀ ಹೆಚ್.ಟಿ. ನಾಗೇಂದ್ರ, ಫೋನ್ ನಂ: 9341219116, 9535383588; ಇ-ಮೇಲ್ : nagendra.ht@gmail.com